ಕುರಿರೊಪ್ಪದ ಮೇಲೆ ಕತ್ತಲೆ ಮುಸುಕು ಎಳೆದ ನಂತರ ಇವನಿಗೆ ಹಗಲು ತೆರೆದುಕೊಳ್ಳುತ್ತಿತ್ತು. ಬಡತನದ ಯಾತನೆಯು ಅವನನ್ನು ಒಬ್ಬ ಕುಶಲ ಕಳ್ಳನನ್ನಾಗಿ ಪರಿವರ್ತಿಸಿತ್ತು. ಒಂದು ಸಲ ಯಾವುದೋ ಗೊಲ್ಲರಹಟ್ಟಿಗೆ ನುಗ್ಗಿ ಎರಡು ಕುರಿಪಟ್ಲೆಗಳನ್ನು ಅವು ಕಮಕ್‌ಕಿಮಕ್ ಅನ್ನದಂತೆ ಕಂಕುಳಲ್ಲಿ ಇರುಕಿಕೊಂಡು ಬಂದಿದ್ದ. ಸದ್ದಿಲ್ಲದೆ ಕೊಯ್ದು, ಹಟ್ಟಿಯವರಿಗೆಲ್ಲಾ ಕುರಿಬಾಡು ಹಂಚಿ, ಬೆಳಗಾಗುವ ಹೊತ್ತಿಗೆ ಕುರಿಯ ಲವಶೇಷವೂ ಉಳಿಯದಂತೆ ತಿಂದು ಮುಗಿಸಿದ್ದ. ಬೆಳಗ್ಗೆ ಎದ್ದು ನೋಡಿದರೆ, ಒಲೆಗೆ ಬೆಂಕಿ ಕಂಡು ಎಷ್ಟು ದಿವಸವಾಯಿತೋ; ಹಿಟ್ಟಿನ ಮುಖ ನೋಡಿ ಎಷ್ಟು ದಿನವಾಯಿತೋ ಅನ್ನುವ ಹಾಗೆ ಹಟ್ಟಿ ಕಳಾಹೀನವಾಗಿ ಇರುತ್ತಿತ್ತು. ಇದೆಲ್ಲಾ 'ಕಳ್ಳರಾಮ'ನ ಹೊರತು ಮತ್ತ್ಯಾರೂ ಮಾಡಲು ಸಾಧ್ಯವಿಲ್ಲ ಎಂದು ಜನ ನಿಖರವಾಗಿ ನಂಬಿದ್ದರು. ಪೊಲೀಸರೂ ಕೂಡ ಇವನನ್ನು ಹಿಡಿಯಲಾಗದೆ ಕೈಚೆಲ್ಲಿದ್ದರು.

ಇನ್ನೊಂದು ಸಲ, ಬಳ್ಳಾಪುರದ ತೋಟವೊಂದರಲ್ಲಿ ರಾತ್ರಿ ಹೊತ್ತಿನಲ್ಲಿ ಕಾಯಿ ಕದಿಯುತ್ತಿದ್ದಾಗ ಸಿಕ್ಕಿಬಿದ್ದಿದ್ದ. ಆದರೆ ಹೇಗೋ, ಹಾವು ನುಣುಚಿಕೊಳ್ಳುವಂತೆ, ಅವರ ಹಿಡಿತದಿಂದ ಕ್ಷಣಮಾತ್ರದಲ್ಲಿ ತಪ್ಪಿಸಿಕೊಂಡು ಓಡಿ ಹೋಗಿ ಬಳ್ಳಾಪುರದ ತುಂಬಿದ ಕೆರೆಗೆ ಹಾರಿದ್ದ. ಊರಿನವರು ಲಾಟೀನು, ಮೆರೆಗೋಲು, ಬಾಚಿ ಹಿಡಿದು ರಾತ್ರಿಯೆಲ್ಲಾ ಹುಡುಕಾಡಿದರೂ ಅವರಿಗೆ ಸುಳಿವು ಕೊಡದಂತೆ ಕೆರೆಯೊಳಗೇ ಅವುಸಿಕೊಂಡಿದ್ದ. ಅಂತಹ ಈಜುಗಾರ ಅವನು. ತುಂಬಿದ ಬಾವಿಗೆ ಒಂದು ಪಾವಲಿ ಹಾಕಿ, 'ತಂದು ಕೊಡು' ಅಂದರೆ, ಬಾವಿಯೊಳಗೆ ಪಾತಾಳಗರಡಿಯಂತೆ ಮುಳುಗಿ ತಳದಲ್ಲಿದ್ದ ಪಾವಲಿ ತಂದೇ ಬಿಡೋನು. ಈಜೋದರಲ್ಲಿ ಅಂತಹ ರುಸ್ತುಮ್ಮ ಅವನು. ದಿನಕ್ಕೊಂದು ಕಳುವಿನ ವಾರ್ತೆ ಆ ಭಾಗದ ಹಳ್ಳಿಯವರಿಗೆಲ್ಲಾ ಸರ್ವೆಸಾಮಾನ್ಯವಾಗಿತ್ತು. 'ಕಳ್ಳರಾಮನ ಹಾವಳಿಯಿಂದ ನಾವು ನಿರುಮ್ಮಳವಾಗಿ ಬದುಕುವಂತಿಲ್ಲ...' ಎಂದು ಬೆಳಗ್ಗೆ ಎದ್ದರೆ ಜನ ಅವನಿಗೆ ಶಾಪ ಹಾಕುತ್ತಿದ್ದರು. ಕಳ್ಳರಾಮನ ವಿಷಯಕ್ಕೆ ಒಂದು ಅಂತ್ಯ ಕಾಣಿಸಲೇಬೇಕೆಂದು ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದರು.

ಅಂದು ಇಳಿಹೊತ್ತು. ಚಿಕ್ಕರಾಮ ಎಂದಿನಂತೆ ಹಟ್ಟಿಯಲ್ಲೇ ಇದ್ದ. ಊರೊಳಗಿಂದ ಒಂದೇ ಉಸುರಿಗೆ ಒಡೋಡಿ ಬಂದ ಕೆಲವರು ಚಿಕ್ಕರಾಮನ ಹಟ್ಟಿ ಮುಂದೆ ನಿಂತು 'ಚಿಕ್ಕರಾಮ... ಚಿಕ್ಕರಾಮ...' ಎಂದು ಒಂದೇ ಉಸುರಿಗೆ ಕೂಗಿದರು. ಕೂಗಿದವರ ಧ್ವನಿಯಲ್ಲಿ ಭಯ, ಗಾಬರಿ, ದುಃಖ, ಉದ್ವೇಗ ಎಲ್ಲವೂ ಸ್ವಲ್ಪ ಹೆಚ್ಚುಕಡಿಮೆ ಪ್ರಮಾಣದಲ್ಲಿ ಬೆರೆತಿದ್ದವು. ಈಸಲು ಸಾಪೆಯ ಮೇಲೆ ಮಲಗಿದ್ದ ಚಿಕ್ಕರಾಮ ಹೊರಗೆ ಬಂದ. ನಾಲ್ಕಾರು ಜನ ಹಟ್ಟಿ ಮುಂದೆ ನಿಂತಿದ್ದರು. ಅವೆಲ್ಲವೂ ಅವನಿಗೆ ಅಪರಿಚಿತ ಮುಖಗಳಂತೆ ಕಂಡವು. ಇದುವರೆಗೂ ಊರಿನಲ್ಲಿ ನಾನು ನೋಡಿಲ್ಲದ ಮುಖಗಳಿವು ಎಂದು ಅವನಿಗೆ ಅನಿಸಿತು. ಆದರೂ ತನ್ನೊಳಗಿನ ಅನುಮಾನವನ್ನು ತೋರ್ಪಡಿಸಿಕೊಳ್ಳಲಿಲ್ಲ. ಮಾಸ್ತಮ್ಮ ಕತ್ತಾಳೆ ತರಲು ಬಳ್ಳಾಪುರದ ಕೆರೆ ಮಗ್ಗುಲಿನ ಕಸಿಗಿಡದತ್ತ ಹೋಗಿದ್ದಳು. ಬಂದವರು ತಲೆಗೆ ವಲ್ಲಿ ಸುತ್ತಿದ್ದರು. ಗಾಬರಿ ಅವರ ಮಾತುಗಳನ್ನು ಅಸ್ಪಷ್ಟಗೊಳಿಸಿತ್ತು. 'ಚಿಕ್ಕರಾಮ... ಕುರಿಬಿಟ್ಟುಕೊಂಡು ಹೋಗಿದ್ದ ನಮ್ಮ ಹೆಣ್ಮಗ ಒಂದು ಕಾಲುಜಾರಿ ಮುನಿಯಪ್ಪನೋರ ದೊಡ್ಡ ಬಾವಿಗೆ ಬಿದ್ದುಬಿಟ್ಟೈತೆ. ಬಾವಿ ತುಂಬಿ ತೇಪಾಡ್ತಾ ಐತೆ. ಬಾವಿಯೊಳಕ್ಕೆ ಇಳಿಯಲು ಎಲ್ಲರೂ ಹೆದರ್ತಾವರೆ! ನೀನಲ್ಲದೆ ಇನ್ಯಾರೂ ಬಾವಿಗೆ ಇಳಿಯೋರಿಲ್ಲ! ನೀನೆ ಬಂದು ಮಗಿನ ಪ್ರಾಣ ಉಳಿಸಪ್ಪ... ಬೇಕಾದರೆ ನಿನ್ನ ಕಾಲಿಡಿತೀವಿ ಬಾರಪ್ಪ...' ಎಂದು ದೇವರ ಮುಂದೆ ನಿಂತು ಕೇಳಿಕೊಳ್ಳುವಂತೆ ದೈನೇಸಿಯಿಂದ ನಡಬಗ್ಗಿಸಿಕೊಂಡು ಅಂಗಲಾಚಿದರು. ಚಿಕ್ಕರಾಮನಿಗೆ ಆ ಹೆಣ್ಣುಮಗುವೆ ತನ್ನ ಬಳಿಗೆ ಬಂದು ಕೇಳಿಕೊಂಡಂತಾಯಿತು. 'ನಡೀರಣ್ಣ, ನಿಮ್ಮೊಂದನೇ ಬಂದೆ. ಆ ಹೆಣ್ಮಗೀನ ಪ್ರಾಣಕ್ಕಿಂತ ಇನ್ಯಾವುದು ಹೆಚ್ಚು...' ಎಂದು ಚಿಕ್ಕರಾಮ